ಪದಬಂಧ



ಎಡದಿಂದ ಬಲಕ್ಕೆ:

1. ಅವನ ಭುಜದ ಮೇಲೆ ರಾಶಿ ತಾವರೆ (3)
3. ಬರಗಾಲ ಬಂದದ್ದರ ಪರಿಣಾಮ ಎಲ್ಲ ಖಾಲಿ (3)
4. ಸುಭಿಕ್ಷದ ಸಂತಸಕ್ಕೆ ಎಲ್ಲರಿಗೂ ಇನಾಮು (3)
6. ಚಕ್ರವನ್ನು ಸುತ್ತಿ ಸುತ್ತಿ ಎಳೆದರೆ ಬರುವುದು ಡೊಂಕು ರೇಖೆ ತಾನೇ? (4)
7. ಒನಕೆಯ ಬಳಕೆ ಏಕಿಲ್ಲವೆಂದರೆ ಇದು ಹೊಸ ಯುಗ (4)
9. ವಕ್ತಾರನ ವಿವರಣೆಯ ತುಂಬ ಕೆನ್ನೀರಿನ ಬಣ್ಣ (4)
11. ಕಾರಿನಲ್ಲಿ ಧಾವಿಸಿದವ ಕಾವಿಯ ಉಟ್ಟಿದ್ದನೇ? (4)
15. ಜತನವಾಗಿರಿಸಲು ತಕ್ಕದ್ದು ಸುಭದ್ರ ಪೆಟ್ಟಿಗೆ (3)
16. ತಾತ್ಪರ್ಯ ಇಷ್ಟೇ– ಎಲ್ಲದ್ದಕ್ಕೂ ಭಾರೀ ಕೊರತೆ (3)
17. ಕಾಡನ್ನು ಕಡಿಯುವವನೂ ಕೆಟ್ಟ ಮನುಷ್ಯನೇ ತಾನೇ? (3)

ಮೇಲಿಂದ ಕೆಳಕ್ಕೆ:

1. ಎಷ್ಟು ಅಂದವಾಗಿದೆ ನೋಡಿ, ಕಾಲಿನ ಆಭರಣ (3)
2. ಬಂಜರು ಪ್ರದೇಶದಲ್ಲಿದ್ದೂ ಎಂಥ ದರ್ಪ! (3)
3. ಭಂಡರಿಗೆ ಬಡಿಯಲು ಸರಿಯಾಗಿದೆ ದೊಣ್ಣೆ (3)
5. ವಿಶ್ರಮಿಸುವಾಗ ಕೇಳಿಸಿದ ಗಾನ ತುಂಬ ಹಿತಕರವಾಗಿತ್ತು (3)
6. ಜೀರಾಯ್ತಿಯವರಲ್ಲೇ ಅಲ್ಲೊಬ್ಬ ಮುಖ್ಯಮಂತ್ರಿ ಆದಾನೇ? (3)
8. ಹರಿಯಲಿ ಬಿಡಿ ಸಂತಸದ ಅಲೆ (3)
10. ವಾರದ ಅಂತ್ಯದಲ್ಲಿ ಆಕೆಯ ಹುಟ್ಟುಹಬ್ಬ (3)
12. ಕವಿ ಮನೆಯ ಅಲಂಕಾರ– ಸೌಂದರ್ಯಕ್ಕೆ ಬಹು ದೂರ (3)
13. ನೆಲ ಕೊರೆಯಲಿಕ್ಕೆ ಅನುಮತಿಗಾಗಿ ಪ್ರಾರ್ಥನೆ (3)
14. ಶಂಕಿತ ಜನರ ಸಂಖ್ಯೆ ಒಂದು ನೂರು ಮುಟ್ಟಿದೆ (3)

## 8-1-15ರ ಉತ್ತರಗಳು

ಎಡದಿಂದ ಬಲಕ್ಕೆ:
1. ಸಂಭಾವಿತ; 3. ಬಿರುಕು; 4. ರಕ್ಕಸ; 6. ವಿರಚಿತ; 7. ದುಶ್ಚರಿತ; 9. ಸುಪ್ರಭಾತ; 12. ಪಡಸಾಲೆ; 14. ಸರಸಿ, 15. ವಾಲಗ; 16. ಸುಧಾಕರ.

ಮೇಲಿಂದ ಕೆಳಕ್ಕೆ:
1. ಸಂಕುಚಿತ; 2. ತರದೂದು; 3. ಬಿಡಾರ; 5. ಸವಾರಿ; 6. ವಿಸ್ತರಿಸು; 8. ತಕ್ಕಬೆಲೆ; 10. ಪ್ರವಾಸ; 11. ಸಾಲಿಗ; 12. ತಪಾಸಿಸು; 13. ಪರಿವಾರ.

ಪ್ರಶ್ನಾಂಕಣ

# ದಿ ಗ್ರೇಟ್ ವೈಟ್-ಏನು ವಿಶೇಷ?

ದಿ ಗ್ರೇಟ್ ವೈಟ್–ಅದೊಂದು ಶಾರ್ಕ್ ಪ್ರಭೇದ. ಈವರೆಗೆ ತಿಳಿದಿರುವ ನಾಲ್ಕು ನೂರು ಶಾರ್ಕ್ ಪ್ರಭೇದಗಳಲ್ಲೂ ಗಾತ್ರದಲ್ಲಿ ದ್ವಿತೀಯ ಸ್ಥಾನದಲ್ಲಿರುವ ದಿ ಗ್ರೇಟ್ ವೈಟ್ ಶಾರ್ಕ್ ಇನ್ನೆಲ್ಲ ಗುಣ–ಲಕ್ಷಣಗಳಲ್ಲೂ ಅದ್ವಿತೀಯ. ಅದೇ ಅದರ ಮೊದಲ ವೈಶಿಷ್ಟ್ಯ. ಕಡಲಲ್ಲಿ ಬೃಹದಾಕಾರದ ರುದ್ರ ಸುಂದರ ಸಮರ ವಿಮಾನದಂತೆ ಗೋಚರಿಸುವ ದಿ ಗ್ರೇಟ್ ವೈಟ್‌ನ ಶರೀರದ ತಳ ಅರ್ಧ ಭಾಗವಿಡೀ ಶ್ವೇತ ವರ್ಣ (ಚಿತ್ರ–1); ಹಾಗಾಗಿಯೇ ಈ ಹೆಸರು. ಈ ಅದ್ಭುತ ಪ್ರಾಣಿಯ ಇತರ ಪ್ರಮುಖ ವೈಶಿಷ್ಟ್ಯಗಳು:

ದಿ ಗ್ರೇಟ್ ವೈಟ್ ಅತ್ಯಂತ ಶಕ್ತ ಶರೀರದ, ಅತ್ಯಂತ ಉಗ್ರಸ್ವಭಾವದ ಶಾರ್ಕ್. ಸಾಗರಾವಾರದ 'ಅತ್ಯಂತ ದೈತ್ಯ ಬೇಟೆಗಾರ ಮೀನು' ಎಂಬುದು ಅದರ ವಿಶಿಷ್ಟ ದಾಖಲೆ.

ಈ ಶಾರ್ಕ್‌ನ ವೈಜ್ಞಾನಿಕ ಹೆಸರು 'ಕಾರ್ ಚರೊಡಾನ್ ಕಾರ್ ಚರಿಯಾಸ್' ಹಾಗೆಂದರೆ ವಕ್ರ ಹಲ್ಲುಗಳ ಪ್ರಾಣಿ ಎಂದರ್ಥ. ಹಲ್ಲುಗಳ ಸ್ವರೂಪದಿಂದ ನಿಷ್ಪನ್ನಗೊಂಡಿರುವ ಹೆಸರಿಗೆ ತಕ್ಕಂತೆ ಈ ಶಾರ್ಕ್‌ನ ಹಲ್ಲುಗಳು ಭಾರೀ ಭಯಂಕರ (ಚಿತ್ರ–2). ತ್ರಿಭುಜಾಕಾರದ, ಉದ್ದುದ್ದವಾದ, ಹರಿತವಾದ ಚೂರಿಗಳಂತೆ ಅದರ ದಂತ ಪಂಕ್ತಿ. ಅದು ಹಿಡಿವ ಸೀಲ್, ಸೀಲಯನ್, ಡಾಲ್ಫಿನ್ ಇತ್ಯಾದಿ ಬಲಿ ಪ್ರಾಣಿಗಳ ಮೈಯನ್ನು ಕ್ಷಣದಲ್ಲೇ ಹರಿದುಹಾಕುವ, ತುಂಡಾಗಿಸುವ ಹಲ್ಲು–ದವಡೆಗಳ ಬೃಹತ್ ಬಾಯಿ.



ವಯಸ್ಕ ಹಂತದಲ್ಲಿ ದಿ ಗ್ರೇಟ್ ವೈಟ್‌ನದು 16 ರಿಂದ 20 ಅಡಿ ಉದ್ದ, ಎರಡು ಟನ್ ತೂಕ. ಈ ಶಾರ್ಕ್‌ನ ಮರಿಗಳದು ಹುಟ್ಟುವಾಗಲೇ ನಾಲ್ಕು–ಐದು ಅಡಿ ಉದ್ದ; ಇಪ್ಪತ್ತೈದು ಕಿಲೋ ತೂಕ. ಜನಿಸುವಾಗಲೇ ಬೇಟೆಗೆ ಸನ್ನದ್ಧ. ಕಡಲಲ್ಲಿ ಈ ಶಾರ್ಕ್‌ಗೆ ನೈಸರ್ಗಿಕ ಶತ್ರು ಒಂದೂ ಇಲ್ಲ. ಹಾಗಾಗಿ ಅವುಗಳ ಸಂತಾನೋತ್ಪತ್ತಿಯ ವೇಗ ಮತ್ತು ಜನಸಂಖ್ಯೆ ಎರಡೂ ತುಂಬ ಸೀಮಿತ.

ದಿ ಗ್ರೇಟ್ ವೈಟ್ ನರಭಕ್ಷಕ ಎಂಬ ಭಾವನೆ ಜನಜನಿತ. ವಾಸ್ತವವಾಗಿ ಅದು ಮಿಥ್ಯಾ ಕಲ್ಪನೆ. ಮನುಷ್ಯರನ್ನು ಈ ಶಾರ್ಕ್ ಬೇಟೆಯಾಡುವುದು ತೀರ ಆಕಸ್ಮಿಕ, ವಿಪರೀತ ಅಪರೂಪ, ಉದ್ದೇಶರಹಿತ.

ದಿ ಗ್ರೇಟ್ ವೈಟ್‌ಗೆ ಮನುಷ್ಯನೇ ಪರಮ ಶತ್ರು. ಈ ಶಾರ್ಕ್‌ನ ಈಜು ರೆಕ್ಕೆಗಳ ಖಾದ್ಯಗಳಿಗೆ ಅಪಾರ ಬೇಡಿಕೆ! ಹಾಗಾಗಿ ಬಲೆ ಹಾಕಿ ಹಿಡಿದು, ಈಜು ರೆಕ್ಕೆಗಳನ್ನು ಕತ್ತರಿಸಿ ಪಡೆದು, ಕಡಲಿಗೇ ಮತ್ತೆ ಒಗೆದು ನರಕಯಾತನೆಯ ಸಾವಿಗೆ ಗುರಿಯಾಗಿಸುವ ನೀಚ ಕ್ರೂರ ರಕ್ಕಸ ಮನುಷ್ಯರಿಂದಾಗಿ ದಿ ಗ್ರೇಟ್ ವೈಟ್ ಕ್ಷಿಪ್ರವಾಗಿ ಅಲ್ಪಸಂಖ್ಯಾತವಾಗುತ್ತ ಅಳಿವ ಹಾದಿಯಲ್ಲಿದೆ.

■ ಎನ್. ವಾಸುದೇವ್